ಸದ್ಯದ ಕಡಿತಗಳನ್ನು ಒಳಗೊಂಡ ಈ ಕಾರ್ಖಾನೆಗೆ ಮಂಡಳಿಯು ಒದಗಿಸುತ್ತಿರುವ ವಿದ್ಯುತ್ ವಿವರ : ೩೪೯೭೫ ಕಿ.ವಾಟ್‌ಗಳು (ಶೇ. ೭೫ ವಿಧಿಸಿರುವ ಕಡಿತ) ೩೩.೭೫ ವಿಂ. ಯೂನಿಟ್ಸುಗಳು (ಶೇ. ೬೫ ರಂತೆ ವಿಧಿಸಿರುವ ಕಡಿತ)

೨ ಹರಿಹರ ಪಾಲಿಫೈಬರ್ ಕಾರ್ಖಾನೆ :

ಕಾಂಟ್ರಾಕ್ಟ್ ಡಿಮ್ಯಾಂಡ್ : ೨೦೨೦೬೫ ಕೆ. ವಿ. ಎ. ಸದ್ಯದ ಕಡಿತವನ್ನು ಒಳಗೊಂಡ ಈ ಕಾರ್ಖಾನೆಗೆ ಮಂಡಳಿಯು ಒದಗಿಸುತ್ತಿರುವ ವಿದ್ಯುತ್ ವಿವರ.
೯೧೨೦ ಕೆ. ವಿ. ಎ. (೩೩ ೧/೩ ಶೇ. ಕಡಿತ)
೪.೮೯ ಎಂ. ಯು. ವಿಲಿಯನ್ ಯೂನಿಟ್ಸುಗಳು. (೩೩. ೧/೩ ಶೇ. ಕಡಿತ)
ಬಟ್ಟೆ ಗಿರಣಿಯಾದುದರಿಂದ.
ಮೇಲಿನ ಕಾರ್ಖಾನೆಗಳಿಗೆ, ಇತರೇ ಹೆಚ್. ಟಿ. ಕಾರ್ಖಾನೆಗಳಿಗೆ ಒದಗಿಸುತ್ತಿರುವ ದರದಲ್ಲಿ ಅಂದರೆ ಯೂನಿಟ್ಟಿಗೆ ೩೦ ಪೈಸೆ ಮತ್ತು ಡಿಮ್ಯಾಂಡ್ ಚಾರ್ಜ್ ಕೆ. ವಿ. ಎ. ಒಂದಕ್ಕೆ ತಿಂಗಳಿಗೆ ೩೦ ರೂ.ಗಳಂತೆ ದರ ಹಾಕಲಾಗಿದೆ.

ಚೆನ್ನಪಟ್ಟಣದ ಸಬ್ ರಿಜಿಸ್ಟ್ರಾರ್‌ರವರ ವಿರುದ್ಧ ದೂರು

೪೩೦ (೧೭೦೩) ಶ್ರೀ ಎಂ. ವರದೇಗೌಡ.—(ಚನ್ನಪಟ್ಟಣ) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ಸಬ್‌ರಿಜಿಸ್ಟ್ರಾರ್‌ರವರ ವಿರುದ್ಧ ದೂರೇನಾದರೂ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಹೌದು

ಆ) ಜಾಗೃತ ಆಯೋಗದವರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (ವಿಂಗಡಣೆ ನಿಯಂತ್ರಣ, ಮತ್ತು ಮನವಿ) ೧೯೫೭ರ ಕೆಳಗೆ ಇಲಾಖಾ ತನಿಖೆ ಮಾಡಲು ಈಗಾಗಲೇ ಕ್ರಮ ತಕ್ಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ.

ಬೆಂಗಳೂರು ಉತ್ತರ ತಾಲ್ಲೂಕು ದೇವರಜೀವನಹಳ್ಳಿ ಮತ್ತು ಲಿಂಗರಾಜಪುರ ಗ್ರಾಮಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತ.

೪೩೧ (೧೫೪೬) ಶ್ರೀ ವಿ. ಶ್ರೀನಿವಾಸನ್ (ಯಲಹಂಕ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರತ ಸರಕಾರವು ಪಟ್ಟಣ ಅಭಿವೃದ್ಧಿಗಾಗಿ ಬೆಂಗಳೂರು ಉತ್ತರ ತಾಲ್ಲೂಕು ದೇವರ ಜೀವನಹಳ್ಳಿ ಮತ್ತು ಲಿಂಗರಾಜಪುರ ಗ್ರಾಮದ ಅಭಿವೃದ್ಧಿಗಾಗಿ ೧೯೭೭ರಲ್ಲಿ ಎರಡು ಕೋಟಿ ರೂಪಾಯಿ ಹಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಟ್ಟಿರುವುದು ನಿಜವಲ್ಲವೆ, ಹಾಗಿದ್ದಲ್ಲಿ ಈ ಹಣವು ಪೂರ್ತಾ ಖರ್ಚಾಗಿದೆಯೇ ಹಾಗಿಲ್ಲದಿದ್ದಲ್ಲಿ. ಬಾಕಿ ಎಷ್ಟು ಉಳಿದಿದೆ ಹಾಗೂ ಇದನ್ನು ಖರ್ಚು ಮಾಡದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿಂಗಳು ಉಳಿಸಿಕೊಂಡಿರಲು ಕಾರಣವೇನು ?

ಆ) ಉಳಿದಿರುವ ಹಣದಿಂದ ಸದರಿ ಗ್ರಾಮಗಳನ್ನು ತ್ವರಿತವಾಗಿ ಅಭಿವೃದ್ಧಿಗೊಳಿಸಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಕೇವಲ ೭೦ ಲಕ್ಷ ರೂಪಾಯಿಯನ್ನು ಮಾತ್ರ ಸಾಲವಾಗಿ ಕೊಟ್ಟಿರುತ್ತದೆ.

ಆ) ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು.

ನೆಲಮಂಗಲ ಪುರಸಭೆಯ ವ್ಯಾಪ್ತಿಯಲ್ಲಿ ವಸತಿ ನಿವೇಶನ ಮಂಜೂರು ಮಾಡುವುದು.

೪೩೨ (೧೪೪೪) **ಶ್ರೀ ಎಂ. ಜಿ. ಸತ್ಯನಾರಾಯಣ** (ನೆಲಮಂಗಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಪುರಸಭೆಯ ವ್ಯಾಪ್ತಿಯಲ್ಲಿ ವಸತಿ ನಿವೇಶನಗಳ ಅಭಾವವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ,

ಆ) ಜನವರಿ ೧೯೯೬ನೇ ಅಂತ್ಯದವರೆಗೆ ನಿವೇಶನಗಳನ್ನು ಕೋರಿ ಪುರಸಭೆಯವರಿಗೆ ಬಂದಿರುವ ಅರ್ಜಿಗಳೆಷ್ಟು ;

ಇ) ವಸತಿ ನಿವೇಶನಗಳನ್ನು ಮಂಜೂರ್ಮಾಡಲು ಪುರಸಭೆಯವರು ಕೈಕೊಂಡಿರುವ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಬಂದಿದೆ.

ಆ) ೧೦೫೦.

ಇ) ನಿವೇಶನಗಳಿಗಾಗಿ ಪುರಸಭೆಯು ೮ ಎಕರೆ ೧೦ಗುಂಟೆ ಜಮೀನಿನ ಭೂಸ್ವಾಧೀನ ಕ್ರಮ ಕೈಗೊಂಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಉಗ್ರಾಣಿಗಳನ್ನು ನಾಲ್ಕನೇ ದರ್ಜೆ ನೌಕರರೆಂದು ಪರಿಗಣಿಸುವುದು.

೪೩೩ (೧೪೩೭) **ಶ್ರೀ ಎಂ. ಪಿ. ಕರ್ಕಿ** (ಕುಮಟ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯ ಉಗ್ರಾಣಿಗಳಿಗೆ ಸರಕಾರದವರು ಕೊಡುತ್ತಿರುವ ಸಂಬಳವೆಷ್ಟು ;

ಆ) ಇತರ ಜಿಲ್ಲೆಗಳಲ್ಲಿ ತತ್ಸಮಾನವಾದ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸರಕಾರದವರು ಸಾಗುವಳಿ ಭೂಮಿಕೊಟ್ಟಿರುವುದು ನಿಜವೆ ;

ಇ) ಉತ್ತರ ಕನ್ನಡ ಜಿಲ್ಲೆಯ ಉಗ್ರಾಣಿಗಳನ್ನು ಜೀತದಾಳುಗಳಂತೆ ಪರಿಗಣಿಸದೇ ಇನ್ನೇ ದರ್ಜೆ ನೌಕರರೆಂದು ಪರಿಗಣಿಸಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಗ್ರಾಮ ಸಹಾಯಕರಾಗಿ ನೇಮಕಗೊಂಡ ಉಗ್ರಾಣಿಗಳಿಗೆ ತಿಂಗಳಿಗೆ ೧೭೦ ರೂ.ಗಳ ನಿಗದಿತ ಸಂಭಾವನೆಯನ್ನು ಕೊಡಲಾಗುತ್ತಿದೆ.

ಆ) ಅನುವಂಶೀಯ ಹಕ್ಕುಗಳನ್ನು ಕಳೆದುಕೊಂಡ ಗ್ರಾಮಾಧಿಕಾರಿಗಳು ಸರ್ಕಾರದಲ್ಲಿ ವಿಹಿತವಾಗಿದ್ದು ಸೇವಾ ನಿಯಮಗಳ ಧಾರಣ ಕ್ರಮವನ್ನು ಕಟ್ಟಿದರೆ ಮಾರು ಮಂಜೂರಾತಿಗೆ ಅರ್ಹರಾಗುತ್ತಾರೆ.

ಇ) ಇಲ್ಲ.